# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1191 |
| 2. | ಸದಸ್ಯರ ಹೆಸರು | : | ಡಾ: ಯತೀಂದ್ರ ಎಸ್. (ವಿಧಾನ ಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸುವ ಸಚಿವರು | : | ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು. |
| 4. | ಉತ್ತರಿಸುವ ದಿನಾಂಕ | : | 19/12/2024. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಕೆಲವು ವರ್ಷಗಳಿಂದ ಕೋಮು ನಿಂದನೆ ಸರ್ವೇ ಸಾಮಾನ್ಯವಾಗಿದ್ದು, ಇದರಿಂದ ಸಾಕಷ್ಟು ಮಾನವ ಹಕ್ಕುಗಳು ಉಲ್ಲಂಘನೆಯಾಗುತ್ತಿರುವ ವಿಚಾರ ಕುರಿತು ಕರ್ನಾಟಕ ಮಾನವ ಹಕ್ಕುಗಳ ಆಯೋಗದಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ; (ಪ್ರಕರಣಗಳ ವಿವರ ಒದಗಿಸುವುದು) | ಒಟ್ಟು 26 ಪ್ರಕರಣಗಳು ದಾಖಲಾಗಿರುತ್ತವೆ. ಪ್ರಕರಣಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಕೋಮು ನಿಂದನೆ ತಡೆಯಲು ಕರ್ನಾಟಕ ಮಾನವ ಹಕ್ಕುಗಳ ಆಯೋಗದಡಿ ಪ್ರತ್ಯೇಕ ವಿಭಾಗವಿದೆಯೇ; ಇಲ್ಲದಿದ್ದಲ್ಲಿ ಒಂದು ಹೊಸ ವಿಭಾಗ ಸ್ಥಾಪಿಸುವ ಉದ್ದೇಶವಿದೆಯೇ? (ವಿವರ ಒದಗಿಸುವುದು) | ಇಲ್ಲ<br><br>ಹೊಸ ವಿಭಾಗ ಸ್ಥಾಪಿಸುವ ಉದ್ದೇಶವಿರುವುದಿಲ್ಲ. |

ಸಂಖ್ಯೆ: ಲಾ-ಹೆಚ್‌ಆರ್‌ಎಮ್/ 172/2024

(ಎಚ್.ಕೆ. ಪಾಟೀಲ)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು, ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು



Generated from eOffice by H K PATIL, MIN-LAW(HKP), MINISTER, MINISTER - LAW on 17/12/2024 12:40 PM

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಯತೀಂದ್ರ ಎಸ್., ರವರು ಸಲ್ಲಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1121 (1191)ರ ಅನುಬಂಧ

| ಕ್ರ ಸಂ. | ಪ್ರಕರಣ ಸಂಖ್ಯೆ | ದೂರುದಾರರ ಹೆಸರು | ಸಂತ್ರಸ್ತರ ಹೆಸರು | ಜಿಲ್ಲೆ ಹೆಸರು | ಕೋಮು ನಿಂದನೆಯ ಅರ್ಜಿಯ ಸಾರಾಂಶ |
|---|---|---|---|---|---|
| 1. | 4451/10/14/2021-V | ಶ್ರೀ ಸಿದ್ದಲಿಂಗೇಗೌಡ | ಸಾರ್ವಜನಿಕರು | ಮಂಡ್ಯ | ಶ್ರೀ ಸಿದ್ದಲಿಂಗೇಗೌಡ, ತುಮಕೂರು ಜಿಲ್ಲೆ, ತುರುವೇಕೆರೆ ತಾಲೂಕಿನ ಮಾವಿನಕೆರೆ ರವರು ದೂರು ಸಲ್ಲಿಸಿ, ದಿನಾಂಕ 16-02-2021 ರಂದು ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲೂಕಿನ ಹರಿಹರಪುರದಲ್ಲಿ ಪರಿಶಿಷ್ಟ ಜಾತಿಯ ಕಾಲೋನಿಗೆ ಮೇಲ್ಜಾತಿಯವರು ಅಕ್ರಮವಾಗಿ ಪ್ರವೇಶಿಸಿ ಪರಿಶಿಷ್ಟ ಜಾತಿಯವರಿಗೆ ದೇವಸ್ಥಾನ ಪ್ರವೇಶಕ್ಕೆ ಅಡ್ಡಿಪಡಿಸಿ, ಅಂಗಡಿಗಳನ್ನು ಮುಚ್ಚುವಂತೆ ಒತ್ತಾಯಿಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. 75 ವರ್ಷಗಳ ಸ್ವಾತಂತ್ರ್ಯದ ನಂತರವೂ ಅಸ್ಪೃಶ್ಯತೆ ಆಚರಣೆಯಲ್ಲಿದೆ ಎಂದು ದೂರರ್ಜಿ ಸಲ್ಲಿಸಿದ್ದಾರೆ. |
| 2. | 1626/10/31/2022-V | ಶ್ರೀ ಬಾಲಾಜಿ ಎಸ್. ಎಲ್. | ಶ್ರೀ ಬಾಲಾಜಿ ಎಸ್. ಎಲ್. | ಬೆಂಗಳೂರು | ಬೆಂಗಳೂರಿನ ವೈಟ್‌ಫೀಲ್ಡ್ ಪೋಸ್ಟ್ ನಿವಾಸಿಯಾಗಿರುವ ಬಾಲಾಜಿ ಎಂಬುವವರು ದೂರು ದಾಖಲಿಸಿ, ತಾವು ದಿನಾಂಕ 27.4.2022 ರಂದು ಕೋಳಿ ಫಾರಂ ರಸ್ತೆಯ ಮುಂದೆ ಹೋಗುತ್ತಿದ್ದಾಗ ಕೋಳಿ ಫಾರಂ ರಸ್ತೆಯ ನಿವಾಸಿಗಳಾದ ಶ್ರೀಮತಿ ಜಯಲಕ್ಷ್ಮಮ್ಮ ಮತ್ತು ಅವರ ಪತಿ ಇದ್ದಕ್ಕಿದ್ದಂತೆ ತಮಗೆ ಅಡ್ಡಿಪಡಿಸಿ, ತಾವು "ಹೊಲೆಯ" (ಪರಿಶಿಷ್ಟ ಜಾತಿ) ಗೆ ಸೇರಿದವರಾಗಿರುವುದರಿಂದ ಆ ದಾರಿಯಲ್ಲಿ ಬರದಂತೆ ಹೇಳಿ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಈ ಬಗ್ಗೆ ದೂರುದಾರರು ವರ್ತೂರು ಪೊಲೀಸ್ ಠಾಣೆಗೆ ಎರಡು ಬಾರಿ ದೂರು ಸಲ್ಲಿಸಿದ್ದು, ವರ್ತೂರು ಪೊಲೀಸರಿಗೆ ಮತ್ತು ವೈಟ್‌ಫೀಲ್ಡ್ ವಿಭಾಗದ ಡಿಸಿಪಿಗೆ ದೂರು ನೀಡಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆಯೋಗಕ್ಕೆ ದೂರರ್ಜಿ ಸಲ್ಲಿಸಿದ್ದಾರೆ. |

| | | | | | |
|---|---|---|---|---|---|
| 3. | 2016/10/2/2023-V | ಶ್ರೀಮತಿ ಹೇಮಾ ಡಿ. ಶಿಪ್ಪೂರಕರ | ಶ್ರೀಮತಿ ಹೇಮಾ ಡಿ. ಶಿಪ್ಪೂರಕರ | ಬೆಳಗಾವಿ | ಈ ಪ್ರಕರಣದಲ್ಲಿ ದೂರುದಾರರು ಹಾಗೂ ನೊಂದ ವ್ಯಕ್ತಿಯಾದ ಶ್ರೀಮತಿ ಹೇಮಾ ಡಿ. ಶಿಪ್ಪೂರಕರ ರವರು ಶ್ರೀ ಎಸ್. ಎಸ್. ಜಳಕೆ ಸರ್ಕಾರಿ ಪ್ರೌಢಶಾಲೆ, ಚಿಕ್ಕೋಡಿ ತಾಲ್ಲೂಕು ರಲ್ಲಿ ದೈಹಿಕ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾವು ಪರಿಶಿಷ್ಟ ಜಾತಿಗೆ ಸೇರಿದ್ದು, ಎದುರುದಾರರಾದ ಶ್ರೀಮತಿ ಎ.ಬಿ. ಸಿಲ್ಲಾಪುರೆ, ಗಣಿತ ಶಿಕ್ಷಕರು, ಇವರು ದೂರುದಾರರಿಗೆ ಜಾತಿ ನಿಂದನೆ ಮಾಡಿ, ಅವರ ವೈಯಕ್ತಿಕ ವಿಚಾರಗಳಲ್ಲಿ, ತಲೆ ಹಾಕುತ್ತಿದ್ದು, ಮತ್ತು ಶಾಲೆಯ ವಿದ್ಯಾರ್ಥಿಗಳಿಗೂ ಸಹ, ದೂರುದಾರರ ಮೇಲೆ ಅಗೌರವ ತೋರಲು ಪ್ರೇರೆಪಿಸಿರುತ್ತಾರೆ. ಈ ಬಗ್ಗೆ ಶಾಲೆಯ ಮುಖ್ಯ ಶಿಕ್ಷಕರ ಗಮನಕ್ಕೆ ತಂದರೂ ಸಹಾ, ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಲಾಗಿದೆ. |
| 4. | 2347/10/14/2023-V | ಶ್ರೀಮತಿ ಭಾಗ್ಯಮ್ಮ | ಶ್ರೀಮತಿ ಭಾಗ್ಯಮ್ಮ | ಮಂಡ್ಯ | ಈ ಪ್ರಕರಣದಲ್ಲಿ ದೂರುದಾರರು ಹಾಗೂ ನೊಂದ ವ್ಯಕ್ತಿಯಾದ ಶ್ರೀಮತಿ ಭಾಗ್ಯಮ್ಮ ರವರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಮಾರದೇವನಹಳ್ಳಿ ಗ್ರಾಮದ ನಿವಾಸಿಯಾಗಿದ್ದು, ಸದರಿಯವರು ಸುಮಾರು 30 ವರ್ಷಗಳಿಂದಲೂ ಅದೇ ಗ್ರಾಮದ ಸ. ನಂ. 29 ರಲ್ಲಿ ಸರ್ಕಾರಕ್ಕೆ ಸೇರಿದ 2 ಎಕರೆ ಜಮೀನಿನಲ್ಲಿ ಅನಧಿಕೃತವಾಗಿ ಅನುಭವಿಸುತ್ತಿದ್ದು, ಈ ಬಗ್ಗೆ ಸಕ್ರಮ ಪ್ರಕ್ರಿಯೆಗಾಗಿ ನಮೂನೆ ನಂ. 53 ರಡಿ ಅರ್ಜಿ ಬಾಕಿಯಿರುವಾಗ ಅದೇ ಗ್ರಾಮದ ಮೇಲ್ವರ್ಗದ ಜನರಾದ ಶ್ರೀ ಮಂಚೇಗೌಡ ಮತ್ತು ಇತರರು ದೂರುದಾರರ ಜಾತಿಯ ಮೇಲೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ದೂರುದಾರರನ್ನು ಹಾಗೂ ಅವರ ಕುಟುಂಬಸ್ಥರನ್ನು ಗ್ರಾಮದಿಂದ ಸಾಮಾಜಿಕ ಬಹಿಷ್ಕಾರವನ್ನು ಹಾಕಿರುತ್ತಾರೆ. ಈ ಕುರಿತು ಬೆಳ್ಳೂರು ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಲಾಗಿದೆ. |

| | | | | | |
|---|---|---|---|---|---|
| 5. | 3913/10/31/2023-V | ಶ್ರೀಮತಿ ಕಲಾವತಿ ಹೆಚ್. ಎಂ. | ಶ್ರೀಮತಿ ಕಲಾವತಿ ಹೆಚ್. ಎಂ. | ಬೆಂಗಳೂರು ನಗರ | ಈ ಪ್ರಕರಣದಲ್ಲಿ ದೂರುದಾರರು ಹಾಗೂ ನೊಂದ ವ್ಯಕ್ತಿಯಾದ ಶ್ರೀಮತಿ ಕಲಾವತಿ ಹೆಚ್. ಎಂ. ರವರು ಬೆಂಗಳೂರು ಉತ್ತರ ತಾಲ್ಲೂಕಿನ ಹೆಣ್ಣೂರು ಗ್ರಾಮದ ನಿವಾಸಿಯಾಗಿದ್ದು, ಅವರು ಡಯಾನಾ ಐಸ್‌ಕ್ರೀಂ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಅದೇ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಆಂಟೋನಿ ಮೇರಿ, ಐಸ್ಲಾಕ್ ಮತ್ತು ಇತರರು ದೂರುದಾರರಿಗೆ ಕೆಲಸಕ್ಕೆ ಬರಬಾರದು ಎಂದು ಹೇಳಿ, ಅವರ ಜಾತಿಯ ಮೇಲೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ಈ ಬಗ್ಗೆ ಹೆಣ್ಣೂರು ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದರೂ ಸಹಾ, ಪೊಲೀಸರು ಎನ್ .ಸಿ.ಆರ್ ದಾಖಲಿಸಿ, ಯಾವುದೇ ವಿಚಾರಣೆ ಕೈಗೊಂಡಿರುವುದಿಲ್ಲ. ಆದ್ದರಿಂದ, ಸೂಕ್ತ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಲಾಗಿದೆ. |
| 6. | 4007/10/31/2023-V | ಶ್ರೀ ವಿ. ಸುಗುಮಾರ | ಶ್ರೀ ಮದನ್ ಪಿ. | ಬೆಂಗಳೂರು ನಗರ | ದೂರುದಾರರಾದ ಶ್ರೀ ಸುಗುಮಾರ ವಿ., ಇವರು ಆಲ್ ಇಂಡಿಯಾ ಹ್ಯೂಮನ್ ರೈಟ್ಸ್ ಆರ್ಗನೈಸೇಷನ್, ಬೆಂಗಳೂರು ಸಂಸ್ಥೆಯ ಅಧ್ಯಕ್ಷರಾಗಿದ್ದು, ನೊಂದ ವ್ಯಕ್ತಿಯಾದ ಮದನ್ ರವರ ಪರವಾಗಿ ದೂರು ಸಲ್ಲಿಸಿದ್ದು, ಎದುರುದಾರರಾದ ಶ್ರೀ ಆಂಡರ್‌ಸನ್, ಶ್ರೀಮತಿ ಏಂಜಲ್ ಶೆರ್ಲಿನ್, ಶ್ರೀಮತಿ ಸೋಫಿಯಾ ರಾಣಿ ಮತ್ತು ಇತರರು ದೂರುದಾರರ ಜಾತಿ ಹೆಸರು ಹೇಳಿಕೊಂಡು ನಿಂದನೆ ಮಾಡಿ, ಪ್ರಾಣ ಬೆದರಿಕೆ ಹಾಕಿರುತ್ತಾರೆ. ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿದ್ದರೂ ಸಹಾ, ಎದುರುದಾರರು ಪ್ರಭಾವಿ ವ್ಯಕ್ತಿಗಳಾಗಿರುವುದರಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಲಾಗಿದೆ. |
| 7. | 34/10/14/2024-V | ಶ್ರೀ ಎ. ಬೋರಯ್ಯ | ಶ್ರೀ ಎ. ಬೋರಯ್ಯ | ಮಂಡ್ಯ | ಈ ಪ್ರಕರಣದಲ್ಲಿ ದೂರುದಾರರು ಹಾಗೂ ನೊಂದ ವ್ಯಕ್ತಿಯಾದ ಶ್ರೀ ಎ. ಬೋರಯ್ಯ ರವರು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಅಜ್ಜಹಳ್ಳಿ ಗ್ರಾಮದ ನಿವಾಸಿಯಾಗಿದ್ದು, ಅದೇ ಗ್ರಾಮದ ಮೇಲ್ವರ್ಗದ ಜನರು ಸಾರ್ವಜನಿಕ ಸ್ಥಳಗಳಾದ |

| | | | | | |
|---|---|---|---|---|---|
| | | | | | ದೇವಾಲಯ, ಶಾಲಾ ಕಾಲೇಜು ಹಾಗೂ ಹೋಟೆಲ್‌ಗಳಿಗೆ ಅವರ ಪ್ರವೇಶವನ್ನು ನಿರ್ಬಂಧಿಸಿರುತ್ತಾರೆ. ಆದುದರಿಂದ, ಸೂಕ್ತ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಲಾಗಿದೆ. |
| 8. | 100/10/25/2024-V | ಶ್ರೀ ನಿಂಗರಾಜು | ಶ್ರೀ ನಿಂಗರಾಜು | ಚಾಮರಾಜನಗರ | ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ನಿಂಗರಾಜುರವರು ದೂರು ಅರ್ಜಿ ಸಲ್ಲಿಸಿ, ತಮಗೆ ಷಣ್ಮುಗ ಸ್ವಾಮಿರವರು ಜಾತಿ ನಿಂದನೆ ಮಾಡಿ ಜೀವ ಬೆದರಿಕೆ ಹಾಕಿದ್ದು, ಈ ಬಗ್ಗೆ ಮುಂಬಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು ಪಿಎಸ್‌ಐ ರವರು ಎದುರುದಾರರೊಂದಿಗೆ ಸೇರಿ ಯಾವುದೇ ಕ್ರಮವಹಿಸಿರುವುದಿಲ್ಲ ಎಂದು ಆಯೋಗಕ್ಕೆ ದೂರರ್ಜಿ ಸಲ್ಲಿಸಿದ್ದಾರೆ. |
| 9. | 200/10/6/2024-V | ಶ್ರೀ ಮಾರುತಿ | ಶ್ರೀ ಮಾರುತಿ | ಚಿಕ್ಕಮಗಳೂರು | ದೂರುದಾರರರು ಹಾಗೂ ನೊಂದ ವ್ಯಕ್ತಿಯಾದ ಶ್ರೀ ಮಾರುತಿ ರವರನ್ನು ದಿ: 07/05/2023 ರಂದು ರಾಯಚೂರು ರೈಲ್ವ ಭದ್ರತಾ ಅಧಿಕಾರಿ ಮತ್ತು ಸಿಬ್ಬಂದಿಗಳು ಪ್ಲಾಟ್ ಫಾರಂ ಟಿಕೇಟನ್ನು ಖರೀದಿಸಿಲ್ಲ ಎಂಬ ಕಾರಣಕ್ಕಾಗಿ ಹಲ್ಲೆ ಮಾಡಿ, ಜಾತಿ ಹೆಸರಿನ ಮೇಲೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಆತನನ್ನು 5 ದಿನಗಳ ಕಾಲ ಅಕ್ರಮವಾಗಿ ಬಂಧನದಲ್ಲಿರಿಸಿದ್ದರು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಯೋಗವನ್ನು ಕೋರಲಾಗಿದೆ. |
| 10. | 823/10/15/2024-V | ಶ್ರೀಮತಿ ಮಂಗಳಗೌರಿ | ಶ್ರೀಮತಿ ಮಂಗಳಗೌರಿ | ಮೈಸೂರು | ಈ ಪ್ರಕರಣದಲ್ಲಿ ದೂರುದಾರರು ಹಾಗೂ ನೊಂದ ವ್ಯಕ್ತಿಯಾದ ಶ್ರೀಮತಿ ಮಂಗಳಗೌರಿ ರವರು ಮೈಸೂರು ನಗರದ ನಿವಾಸಿಯಾಗಿದ್ದು, ಎದುರುದಾರರಾದ ಮನ್ಸೂರ್ ಮತ್ತು ಇತರರು ದೂರುದಾರರ ಮೇಲೆ ಹಲ್ಲೆ ಮಾಡಿ, ವಸ್ತ್ರಗಳನ್ನು ಎಳೆದಾಡಿ ವಿಡಿಯೋ ಚಿತ್ರೀಕರಣಗೊಳಿಸಿ, ಕಿರುಕುಳವನ್ನು ನೀಡಿರುತ್ತಾರೆ. ಈ ಕುರಿತು ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದರೂ ಸಹಾ, ಪೊಲೀಸರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಲಾಗಿದೆ. |

| | | | | | |
|---|---|---|---|---|---|
| 11. | 953/10/24/2024-V | ಶ್ರೀ ಸಿದ್ದಲಿಂಗೇಗೌಡ | ಪಲೀಂದು | ಕೊಪ್ಪಳ | ಈ ಪ್ರಕರಣದ ದೂರುದಾರರಾದ ಶ್ರೀ ಸಿದ್ದಲಿಂಗೇಗೌಡ ರವರು ಕೊಪ್ಪಳ ಜಿಲ್ಲಾಡಳಿತದ ವಿರುದ್ಧ ದೂರು ನೀಡಿದ್ದು, ಜಿಲ್ಲೆಯಲ್ಲಿ ದಲಿತ ಸಮಾಜಕ್ಕೆ ಸೇರಿದ ಜನರ ವಿರುದ್ಧ ಶೋಷಣೆ ಆಗುತ್ತಿದ್ದು, ದಲಿತ ಜನರಿಗೆ ಸಾರ್ವಜನಿಕ ಸ್ಥಳಗಳಾದ ಹೋಟೆಲ್, ಅಂಗಡಿಗಳು ಮತ್ತು ಕುಡಿಯುವ ನೀರಿನ ಟ್ಯಾಂಕಿಗೆ ಪ್ರವೇಶ ನಿರ್ಬಂಧಿಸಿದ್ದು, ಈ ಕುರಿತು ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ಕೊಪ್ಪಳ ಜಿಲ್ಲಾಡಳಿತ ವಿರುದ್ಧ ಆಯೋಗಕ್ಕೆ ದೂರನ್ನು ನೀಡಿರುತ್ತಾರೆ. |
| 12. | 1141/10/14/2024 | ಶ್ರೀ ವಿಜಯಕುಮಾರ್ | ಶ್ರೀ ವಿಜಯಕುಮಾರ್ | ಮಂಡ್ಯ | ಈ ಪ್ರಕರಣದಲ್ಲಿ ದೂರುದಾರರು ಹಾಗೂ ನೊಂದ ವ್ಯಕ್ತಿಯಾದ ಶ್ರೀ ವಿಜಯಕುಮಾರ್ ರವರು ಮಂಡ್ಯ ಜಿಲ್ಲೆಯ ಕೋಮೆರಹಳ್ಳಿ ಗ್ರಾಮದ ನಿವಾಸಿಯಾಗಿದ್ದು, ಸದರಿಯವರನ್ನು ದಿ: 13/03/2024 ರಂದು ಕೆರಗೋಡು ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ರಂಗಪ್ಪ ಸಲಾಮರ ಮತ್ತು ಇತರೆ ಸಿಬ್ಬಂದಿಗಳು ದೂರುದಾರರ ಮೇಲೆ ಹಲ್ಲೆ ಮಾಡಿ, ದೂರುದಾರರ ಜಾತಿಯ ಹೆಸರಿನಿಂದ ಅವಾಚ್ಯವಾಗಿ ನಿಂದಿಸಿರುತ್ತಾರೆ. ಆದುದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಲಾಗಿದೆ. |
| 13. | 1378/10/31/2024-V | ಶ್ರೀ ರಾಮಚಂದ್ರ | ಶ್ರೀ ರಾಮಚಂದ್ರ | ಬೆಂಗಳೂರು ನಗರ | ದೂರುದಾರರು ಮತ್ತು ನೊಂದ ವ್ಯಕ್ತಿಯಾದ ಶ್ರೀ ರಾಮಚಂದ್ರ ರವರು B.W.S.S.B. ಚಾಮರಾಜಪೇಟೆ ವಿಭಾಗದಲ್ಲಿ ಮೀಟರ್ ರೀಡರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರ ಹಿರಿಯ ಅಧಿಕಾರಿಗಳಾದ ಶ್ರೀ ಹೇಮಂತ್ ಕುಮಾರ್, ಸಹಾಯಕ ಇಂಜಿನಿಯರ್ ರವರು ಕ್ಷುಲ್ಲಕ ಕಾರಣಗಳಿಗೆ ದೂರುದಾರರಿಗೆ ಕರ್ತವ್ಯದಲ್ಲಿ ಕಿರುಕುಳ ಕೊಟ್ಟು, ಜಾತಿ ಹೆಸರಿನಲ್ಲಿ ನಿಂದಿಸಿರುತ್ತಾರೆ ಹಾಗೂ ಕರ್ತವ್ಯಕ್ಕೆ ಹಾಜರಾದರೂ ಸಹಾ, ಹಲವು ಬಾರಿ ಗೈರು ಹಾಜರಿ ಗುರುತು ಮಾಡಿ ಮತ್ತು ಬೇರೊಂದು ವಿಭಾಗಕ್ಕೆ ವರ್ಗಾವಣೆ ಮಾಡುವುದಾಗಿ ಬೆದರಿಕೆ |

| | | | | | |
|---|---|---|---|---|---|
| | | | | | ಹಾಕುತ್ತಿರುತ್ತಾರೆಂದು, ಆದ್ದರಿಂದ ಸದರಿಯವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಆಯೋಗವನ್ನು ಕೋರಲಾಗಿದೆ. |
| 14. | 1388/10/8/2024-V | ಶ್ರೀ ನರಸಿಂಹ ಮೂರ್ತಿ ಡಿ. ಎನ್. | ಶ್ರೀ ನರಸಿಂಹ ಮೂರ್ತಿ ಡಿ. ಎನ್. | ಚಿಕ್ಕಬಳ್ಳಾಪುರ | ಶ್ರೀ ನರಸಿಂಹ ಮೂರ್ತಿ, ಚಿಕ್ಕಬಳ್ಳಾಪುರ ಜಿಲ್ಲೆ, ಇವರು ಈ ದೂರನ್ನು ಸಲ್ಲಿಸಿದ್ದಾರೆ. ದೂರುದಾರರು ತಮ್ಮ ದೂರಿನಲ್ಲಿ ತಾವು ಚಿಕ್ಕಬಳ್ಳಾಪುರ ತಾಲ್ಲೂಕಿನ, ಚೇಳೂರು ಪೊಲೀಸ್ ಠಾಣೆಯಲ್ಲಿ ಹೆಡ್‌ಕಾನ್ಸ್ ಟೇಬಲ್ ನಂ 257 ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಒಂದು ಪ್ರಕರಣಕ್ಕೆ ಸಂಬಂಧಪಟ್ಟಂತೆ ಇನ್ಸ್‌ಪೆಕ್ಟರ್ ರವಿಕುಮಾರ್ ರವರು ದುಡ್ಡು ಪಡೆದು ಅವರನ್ನು ಬಿಟ್ಟು ಬಿಟ್ಟಿದ್ದಾರೆ. ಜಿಲ್ಲೆಯ ಪೊಲೀಸ್ ಆಧೀಕ್ಷಕರು ಈ ಘಟನೆಗೆ ಸಂಬಂಧಪಟ್ಟಂತೆ ವಿಚಾರಣೆ ಮಾಡದೆ ತಮ್ಮ ಮೇಲೆ ಎಫ್.ಐ.ಆರ್ ದಾಖಲಿಸಿದ್ದಾರೆ. ಎಸ್.ಪಿ ಸಾಹೇಬರಿಗೆ ಹೇಳಿದರೆ ತಮ್ಮ ಸಮಸ್ಯೆಯನ್ನು ಅವರು ಕೇಳಲಿಲ್ಲ ಬದಲಾಗಿ ತಮ್ಮನ್ನು ಅಮಾನತುಗೊಳಿಸಿದ್ದಾರೆ. ನಾನು ಪರಿಶಿಷ್ಟ ಜಾತಿಗೆ ಸೇರಿದವನೆಂದು ತಿಳಿದು ಎಸ್.ಪಿ ರವರು ತಮ್ಮ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ಮಾನಸಿಕ ಕಿರುಕುಳ ಕೊಡುತ್ತಿದ್ದಾರೆ ಎಂದು ಆಯೋಗಕ್ಕೆ ದೂರರ್ಜಿ ಸಲ್ಲಿಸಿದ್ದಾರೆ. |
| 15. | 1707/10/15/2024-V | ಶ್ರೀ ಈಶ್ವರ್ | ಶ್ರೀ ಈಶ್ವರ್ | ಮೈಸೂರು | ದೂರುದಾರರಾದ ಶ್ರೀ ಈಶ್ವರ್ ರವರು ಆಯೋಗಕ್ಕೆ ದೂರು ಸಲ್ಲಿಸಿ "ಮೂಗೂರು ಕರ್ನಾಟಕ ಬ್ರಾಹ್ಮಣರ ಸಂಘ(ರಿ)"ವು ಬ್ರಾಹ್ಮಣ ಸಮುದಾಯದವರ ಒಳಿತಿಗಾಗಿ ಸ್ಥಾಪಿಸಿರುವ ಸಂಘವಾಗಿದ್ದು, ಸಂಘದ ಆಡಳಿತ ಮಂಡಳಿಯವರು ಕೈಗೊಳ್ಳುವ ಜಾತಿ ನಿಂದನೆ, ಮಾನವ ಹಕ್ಕುಗಳ ಉಲ್ಲಂಘನೆಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೋರಿ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ. |
| 16. | 1743/10/25/2023-V | ಶ್ರೀ ಮಲ್ಲೇಶ್ | ಶ್ರೀ ಮಲ್ಲೇಶ್ | ಚಾಮರಾಜ- | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕಿನ ಚಿಲಕವಾಡಿ ಗ್ರಾಮದ ನಿವಾಸಿ |

| | | | | | |
|---|---|---|---|---|---|
| | | | | ನಗರ | ಶ್ರೀ ಮಲ್ಲೇಶ್‌ರವರು ದೂರು ಸಲ್ಲಿಸಿ, ದೂರಿನಲ್ಲಿ ಕೊಳ್ಳೇಗಾಲ ತಾಲೂಕು ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ಯಶೋಧ ಮತ್ತು ಕಿಶೋರ್ ಎಂಬವವರು ದೂರುದಾರರಿಗೆ ಆರ್‌ಟಿಸಿ ಎಕ್ಸ್‌ಟ್ರಾಕ್ಟ್ ಕೇಳಿದಾಗ ಅವಾಚ್ಯ ಶಬ್ದಗಳಲ್ಲಿ ನಿಂದಿಸಿ, ಜಾತಿ ನಿಂದನೆ ಮಾಡಿ ಜೀವ ಬೆದರಿಕೆ ಹಾಕಿದ್ದಾರೆ. ಶಿರಸ್ತೇದಾರರ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಸದರಿಯವರ ವಿರುದ್ಧ ಕ್ರಮಕ್ಕಾಗಿ ಈ ದೂರು ಅರ್ಜಿ ಸಲ್ಲಿಸಿದ್ದಾರೆ. |
| 17. | 1785/10/31/2024-V | ಶ್ರೀ ಡಿ. ಸುರೇಶ | ಶ್ರೀ ಡಿ. ಸುರೇಶ | ಬೆಂಗಳೂರು ನಗರ | ದೂರುದಾರರು ಮತ್ತು ನೊಂದ ವ್ಯಕ್ತಿಯಾದ ಶ್ರೀ ಡಿ. ಸುರೇಶ ರವರು ಬೆಂಗಳೂರಿನ ಜೆ.ಪಿ. ನಗರದ ನಿವಾಸಿಯಾಗಿದ್ದು, ತಮ್ಮ ದೂರಿನಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಶೇಷಾದ್ರಿಪುರಂ ಪೊಲೀಸ್ ಠಾಣೆ, ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ನಿಗಮ ಮತ್ತು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರುಗಳ ವಿರುದ್ಧ ದೂರು ನೀಡಿದ್ದು, ದಿನಾಂಕ: 03/10/2023 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ನಿಗಮ ರವರ ಕಛೇರಿಯಿಂದ ಜಯನಗರ ಕಾರ್ಪೋರೇಶನ್ ಕಾಲೋನಿಗೆ ಸಂಬಂಧಿಸಿದಂತೆ ಕೆಲವು ಮಾಹಿತಿ ಹಾಗೂ ದಾಖಲಾತಿಗಳನ್ನು ಕೇಳಿದ್ದು, ಆ ಬಗ್ಗೆ ಮಾಹಿತಿ ಕೊಡಲು ನಿರಾಕರಿಸಿ, ಶ್ರೀ ಸುಬ್ರಮಣಿ, ಸಹಾಯಕ ಕಾರ್ಯಪಾಲಕ ಅಭಿಯಂತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ನಿಗಮ ರವರು ದೂರುದಾರರಿಗೆ ಜಾತಿ ಹೆಸರಿನಲ್ಲಿ ಬೈದಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಲಾಗಿದೆ. |
| 18. | 2020/10/12/2024-V | ಶ್ರೀ ಯೋಗೇಶ್ | ಶ್ರೀ ಯೋಗೇಶ್ | ಹಾಸನ | ಶ್ರೀ ಯೋಗೇಶ್, ಹಾಸನ ಜಿಲ್ಲೆ ಇವರು ಈ ದೂರನ್ನು ಸಲ್ಲಿಸಿದ್ದಾರೆ. ದೂರುದಾರರು ತಮ್ಮ ದೂರಿನಲ್ಲಿ ತಾವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಹವಲ್ದಾರ್ ಎಂದು ಕೆಲಸ ಮಾಡಿ ಸ್ವಯಂ ನಿವೃತ್ತಿ ಹೊಂದಿದ್ದು |

| | | | | | |
|---|---|---|---|---|---|
| | | | | | ಇದುವರೆವಿಗೂ ಸರಿಯಾಗಿ ಪಿಂಚಣಿ ನಿಗದಿಯಾಗಿರುವುದಿಲ್ಲ. ಈ ಬಗ್ಗೆ ವಿಚಾರಣೆಗೆ ಎಂದು ತೆರಳಿದಾಗ ಸಹಾಯಕ ಭದ್ರತಾ ಅಧಿಕಾರಿಗಳು ಮತ್ತು ಭದ್ರತಾ ನಿರೀಕ್ಷಕರು ವಯೋ ವೃದ್ಧ ಎಂದು ಸಹ ಪರಿಗಣಿಸದೆ, ಮಾನಸಿಕ ಕಿರುಕುಳ ನೀಡಿ, ಜಾತಿ ನಿಂದನೆ ಮಾಡಿ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದಾರೆ ಎಂದು ದೂರರ್ಜಿ ಸಲ್ಲಿಸಿದ್ದಾರೆ. |
| 19. | 2013/10/21/2024-V | ಶ್ರೀಮತಿ ಗೀತಾ ಅನಂತ ನಾಯ್ಕ | ಶ್ರೀಮತಿ ಗೀತಾ ಅನಂತ ನಾಯ್ಕ | ಉಡುಪಿ | ಈ ಪ್ರಕರಣದಲ್ಲಿ ದೂರುದಾರರು ಹಾಗೂ ನೊಂದ ವ್ಯಕ್ತಿಯಾದ ಶ್ರೀಮತಿ ಗೀತಾ ಅನಂತ ನಾಯ್ಕ ರವರು ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕು ಗೋಲಿ ಹೊಳೆ ಗ್ರಾಮ ನಿವಾಸಿಯಾಗಿದ್ದು, ಅವರ ಜಮೀನು ಸ. ನಂ. 104/14 ಕ್ಕೆ ಸಂಬಂಧಿಸಿದಂತೆ, ಬೈಂದೂರು ತಹಶೀಲ್ದಾರ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಎದುರುದಾರರಾದ ಮುಟ್ಟಯ್ಯ, ಸುಬ್ಬಯ್ಯ ತಿಮ್ಮಪ್ಪ ಮತ್ತು ಇತರರು ದೂರುದಾರರೊಂದಿಗೆ ಜಗಳ ತೆಗೆದು ದಿ: 09/04/2024 ರಂದು ವಿಜಯಕುಮಾರ ಶೆಟ್ಟಿ ಎಂಬ ವ್ಯಕ್ತಿಯು ದೂರುದಾರರ ಜಾತಿಯ ಬಗ್ಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಅವರ ಮನೆಗೆ ನೀರು ಸರಬರಾಜನ್ನು ಸ್ಥಗಿತಗೊಳಿಸಿರುತ್ತಾರೆ. ಈ ಬಗ್ಗೆ ದಿ: 10/04/2024 ರಂದು ಬೈಂದೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರೂ ಸಹಾ, ಪೊಲೀಸರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಲಾಗಿದೆ. |

| | | | | | |
|---|---|---|---|---|---|
| 20. | 3091/10/29/2024-V | ಶ್ರೀ ಸಿದ್ದಲಿಂಗೇಗೌಡ | ಶ್ರೀ ಅನೀಶ್ | ರಾಮನಗರ | ಶ್ರೀ ಸಿದ್ದಲಿಂಗೇಗೌಡ, ತುಮಕೂರು ಜಿಲ್ಲೆ ಇವರು ಈ ದೂರನ್ನು ಸಲ್ಲಿಸಿದ್ದಾರೆ. ದೂರುದಾರರು ತಮ್ಮ ದೂರಿನಲ್ಲಿ ಕನಕಪುರ ತಾಲ್ಲೂಕು ಮಾಳಗಾಳು ಗ್ರಾಮದಲ್ಲಿ ಸವರ್ಣೀಯರ ಗುಂಪು ಪರಿಶಿಷ್ಟ ಜಾತಿಗೆ ಸೇರಿದ ಅನೀಶ್‌ರವರ ಮೇಲೆ ಹಲ್ಲೆ ಮಾಡಿ ಎಡಗೈಯನ್ನು ತುಂಡರಿಸಿದ್ದಾರೆ. ದೂರುದಾರರ ಸಲ್ಲಿಸಿದ ಪತ್ರಿಕಾ ವರದಿಯಲ್ಲಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ ಹಾಗೂ ಪೊಲೀಸ್‌ರವರು ವಿಚಾರಣೆ ನಡೆಸುತ್ತಿದ್ದಾರೆ ಎಂದು ವರದಿಸಲಾಗಿದೆ. ಸದರಿ ಪತ್ರಿಕಾ ವರದಿಯನ್ನು ಲಗತ್ತಿಸಿ ಆಯೋಗಕ್ಕೆ ದೂರರ್ಜಿ ಸಲ್ಲಿಸಿದ್ದಾರೆ. |
| 21. | 3525/10/29/2024-V | ಸ್ವಯಂ ಪ್ರೇರಿತ ಕೇಸು | ಶ್ರೀ ಶಿವಕುಮಾರ್ | ರಾಮನಗರ | ದಿನಾಂಕ: 24/08/2024 ರ "ಸಂಯುಕ್ತ ಕರ್ನಾಟಕ" ಬೆಂಗಳೂರು ದಿನಪತ್ರಿಕೆಯಲ್ಲಿ "ದಲಿತ ಅಧಿಕಾರಿಯೆಂಬ ಕಾರಣಕ್ಕೆ ತಹಶೀಲ್ದಾರ್‌ಗೆ ಅಪಮಾನ ಸರಿಯಲ್ಲ" ಎಂಬ ಪತ್ರಿಕಾ ವರದಿಯನ್ನು ಆಯೋಗವು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993 ರ ಕಲಂ 12 ರಡಿಯಲ್ಲಿ ಸ್ವಯಂಪ್ರೇರಿತ ದೂರರ್ಜಿಯನ್ನಾಗಿ ದಾಖಲಿಸಿಕೊಂಡಿದೆ. ಮೇಲ್ಕಂಡ ಪತ್ರಿಕಾ ವರದಿಯಲ್ಲಿ ಕನಕಪುರದ ಆಡಳಿತ ಸೌಧದಲ್ಲಿ ಗ್ರೇಡ್-2 ತಹಶೀಲ್ದಾರ್ ಆಗಿರುವ ಶ್ರೀ ಶಿವಕುಮಾರ್ ದಲಿತ ಸಮುದಾಯಕ್ಕೆ ಸೇರಿದ್ದಾರೆಂಬ ಒಂದೇ ಕಾರಣಕ್ಕಾಗಿ ಇವರ ಕಛೇರಿಯನ್ನು ತೆರವುಗೊಳಿಸಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷರಿಗೆ ಕಛೇರಿ ನೀಡುವ ನೆಪದಲ್ಲಿ, ಸಂವಿಧಾನಿಕ ಸ್ಥಾನಮಾನವಲ್ಲದ ಸದರಿ ಅಧ್ಯಕ್ಷರ ಕೊಠಡಿಗಾಗಿ ಇವರ ಕಛೇರಿಯನ್ನೆ ಒಕ್ಕಲೆಬ್ಬಿಸಿರುವುದರಿಂದ ಇವರಿಗೆ ಅಪಮಾನ ಮಾಡಲಾಗಿದೆ. ತಾಲ್ಲೂಕು ಆಡಳಿತ ಸೌಧದಲ್ಲೇ ಅಸ್ಪೃಶ್ಯತೆ ಆಚರಣೆ ಮಾಡಿರುವುದು ಸ್ಪಷ್ಟವಾಗಿ ಬೆಳಕಿಗೆ ಬಂದಿದೆ ಎಂದು ವರದಿಯಾಗಿದೆ. |
| 22. | 3751/10/18/2024-V | ಶ್ರೀ ಮಂಜುನಾಥ್ | ಶ್ರೀ ಮಂಜುನಾಥ್ | ಶಿವಮೊಗ್ಗ | ಶ್ರೀ ಮಂಜುನಾಥ ಬಿನ್ ನಾಗಪ್ಪ ನಾಯ್ಕ, ಶಿವಮೊಗ್ಗ ಜಿಲ್ಲೆ ಇವರು ಈ ದೂರನ್ನು ಸಲ್ಲಿಸಿದ್ದಾರೆ. ದೂರುದಾರರು ತಮ್ಮ ದೂರಿನಲ್ಲಿ ತಾವು ಪರಿಶಿಷ್ಟ ಪಂಗಡಕ್ಕೆ ಸೇರಿದ್ದು |

| | | | | | |
|---|---|---|---|---|---|
| | | | | | ಸರ್ಕಾರದವರು ಅರಣ್ಯ ಭೂಮಿಯ ಹಕ್ಕು ಪತ್ರವನ್ನು ತಮಗೆ ನೀಡಿದ್ದಾರೆ. ಅಲ್ಲಿ ತಾವು ಕೃಷಿ ಮಾಡಿಕೊಂಡು ಜೀವನವನ್ನು ಸಾಗಿಸುತ್ತಿರುವಾಗ ಏಕಾ ಏಕಿ ಕೋಣಂದೂರು ಪೊಲೀಸ್ ಉಪಠಾಣೆಯ ಪೊಲೀಸ್ ನವರಾದ ಪ್ರವೀಣ್, ದಫೇಧಾರ್ ರವರು ಹಾಗೂ ತಹಂಬ್ರಕಪುರ ಗ್ರಾಮ ಪಂಚಾಯಿತಿ ಪಿ.ಡಿ.ಓ ರವರು ತಮಗೆ ಬೆದರಿಸಿ ಪರಿಶಿಷ್ಟ ಪಂಗಡದ ಜನರಾದ ತಮ್ಮ ಮೇಲೆ ಜಾತಿ ನಿಂದನೆ ಮಾಡಿ ಬಲತ್ಕಾರವಾಗಿ ತಮ್ಮ ಜಾಗದಲ್ಲಿ ನಿಂತು ಬೇರೆಯವರಿಗೆ ಬೇಲಿ ಹಾಕಲು ಸಹಾಯ ಮಾಡಿರುತ್ತಾರೆ. ತಮ್ಮ ಜಮೀನಿನಲ್ಲಿದ್ದ ಮರವನ್ನು ಕಡಿದಿದ್ದಾರೆ ಇತ್ಯಾದಿ ಎಂದು ದೂರಿರುತ್ತಾರೆ. |
| 23. | 3758/10/26/2024-V | ಸ್ವಯಂಪ್ರೇರಿತ | ಅರ್ಜುನ್ ಮಾದರ | ಬಾಗಲ-ಕೋಟೆ | ದಿನಾಂಕ: 16/09/2024 ರ "ಉದಯವಾಣಿ" ಬೆಂಗಳೂರು ದಿನಪತ್ರಿಕೆಯಲ್ಲಿ "ದೇಗುಲ ಪ್ರವೇಶಿಸಿದ ದಲಿತನಿಗೆ ಕಂಬಕ್ಕೆ ಕಟ್ಟಿ ಥಳಿತ" ಬಾದಾಮಿ ತಾಲೂಕಿನ ಉಗಲವಾಟ ಗ್ರಾಮದಲ್ಲಿ ಘಟನೆ 118 ಜನರ ವಿರುದ್ಧ ಪ್ರಕರಣ ದಾಖಲು ಎಂಬ ಪತ್ರಿಕಾ ವರದಿಯನ್ನು ಆಯೋಗವು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993 ರ ಕಲಂ 12 ರಡಿಯಲ್ಲಿ ಸ್ವಯಂಪ್ರೇರಿತ ದೂರರ್ಜಿಯನ್ನಾಗಿ ದಾಖಲಿಸಿಕೊಂಡಿದೆ. ಮೇಲ್ಕಂಡ ಪತ್ರಿಕಾ ವರದಿಯಲ್ಲಿ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಉಗಲವಾಟ ಗ್ರಾಮದಲ್ಲಿ ಅರ್ಜುನ್ ಮಾದರ ಎಂಬ ದಲಿತ ವ್ಯಕ್ತಿ, ದ್ಯಾಮವ್ವನ ದೇವಸ್ಥಾನ ಪ್ರವೇಶ ಮಾಡಿದ ಹಿನ್ನಲೆಯಲ್ಲಿ, ಅದೇ ಗ್ರಾಮದ ಸವರ್ಣೀಯರು, ಆತನಿಗೆ ಜಾತಿ ನಿಂದನೆ ಮಾಡಿ, ದೇವಸ್ಥಾನದ ಎದುರಿನ ಕಂಬಕ್ಕೆ ಕಟ್ಟಿ ಹಾಕಿ ತಳಿಸಿದ್ದಾರೆ. ಸವರ್ಣೀಯರೆಲ್ಲ ಸಭೆ ಸೇರಿ ದಲಿತರಿಗೆ ತಮ್ಮ ಬಡಾವಣೆ ಮತ್ತು ದೇವಸ್ಥಾನದ ಪ್ರವೇಶದಿಂದ ಬಹಿಷ್ಕಾರ ಹಾಕಿ ಗ್ರಾಮದಲ್ಲಿ ಡಂಗೂರ ಸಹ ಹೊಡೆಸಿದ್ದಾರೆ ಎಂದು ವರದಿಯಾಗಿದೆ. |

| | | | | | |
|---|---|---|---|---|---|
| 24. | 3929/10/12/20 24-V | ಶ್ರೀ ಸುನೀಲ ಕುಮಾರ | ಶ್ರೀ ಸುನೀಲ ಕುಮಾರ | ಹಾಸನ | ಈ ಪ್ರಕರಣದಲ್ಲಿ ದೂರುದಾರರು ಹಾಗೂ ನೊಂದ ವ್ಯಕ್ತಿಯಾದ ಶ್ರೀ ಸುನೀಲ ಕುಮಾರ ರವರು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಕನಕಟ್ಟೆ ಗ್ರಾಮದ ನಿವಾಸಿಯಾಗಿದ್ದು, ಅವರು ಈಡಿಗ ಜನಾಂಗಕ್ಕೆ ಸೇರಿರುತ್ತಾರೆ. ಅದೇ ಗ್ರಾಮದ ಗೌಡ ಮತ್ತು ಪಟೇಲ್ ಜನಾಂಗದವರು ದೂರುದಾರರು ಹಾಗೂ ಅವರ ಕುಟುಂಬದವರನ್ನು ಗ್ರಾಮದಿಂದ ಬಹಿಷ್ಕರಿಸಿ, ಸಾರ್ವಜನಿಕ ಸ್ಥಳಗಳಿಗೆ ಅವರ ಪ್ರವೇಶವನ್ನು ನಿರ್ಬಂಧಿಸಿರುತ್ತಾರೆ. ಈ ಬಗ್ಗೆ ಬಾಣವಾರ ಪೊಲೀಸ್ ಠಾಣೆಗೆ ದೂರು ನೀಡಿದ್ದರೂ ಸಹಾ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಸೂಕ್ತ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಲಾಗಿದೆ. |
| 25. | 4873/10/12/20 24-V | ಶ್ರೀಮತಿ ರತ್ನಮ್ಮ | ಶ್ರೀಮತಿ ರತ್ನಮ್ಮ | ಹಾಸನ | ದೂರುದಾರರು ಮತ್ತು ನೊಂದ ವ್ಯಕ್ತಿಯಾದ ಶ್ರೀಮತಿ ರತ್ನಮ್ಮ ರವರು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಕಣಕಟ್ಟೆ ಗ್ರಾಮದ ವಾಸಿಯಾಗಿದ್ದು, ಸದರಿಯವರು ತಮ್ಮ ದೂರಿನಲ್ಲಿ ಬಾಣವಾರ ಮತ್ತು ಕಣಕಟ್ಟೆ ಪೊಲೀಸ್ ಠಾಣೆಗಳ ಅಧಿಕಾರಿಗಳ ಮೇಲೆ ದೂರು ನೀಡಿ, ತಮ್ಮ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ದೇವಾಲಯದ ಹುಂಡಿಗೆ ಸಂಬಂಧಿಸಿದಂತೆ ಶ್ರೀ ನಾಗೇಶ್ವರ ರಾವ್ ಎಂಬ ವ್ಯಕ್ತಿ ಮುಜರಾಯಿ ಇಲಾಖೆಯ ಅನುಮತಿ ಇಲ್ಲದೇ ಹುಂಡಿಯ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದು, ಈ ಬಗ್ಗೆ ಪೊಲೀಸ್ ಠಾಣೆಗೆ ತಿಳಿಸಲು ಹೋದಾಗ ಎದುರುದಾರರು ಮತ್ತು ಅವರ ಕುಟುಂಬದವರು ದೂರುದಾರರ ಮೇಲೆ ಹಲ್ಲೆ ಮಾಡಿ ಜಾತಿಯ ಹೆಸರಿನಲ್ಲಿ ಬೈದಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಲಾಗಿದೆ. |

| | | | | | |
|---|---|---|---|---|---|
| 26. | 4879/10/6/2024-V | ಸ್ವಯಂಪ್ರೇರಿತ | ಶ್ರೀ ತಿರುಮಲ. ಶ್ರೀ ಬೀರಪ್ಪ , ಶ್ರೀಮತಿ ಲಕ್ಷ್ಮೀದೇವಿ | ಚಿಕ್ಕಮಗ-ಳೂರು | ದಿನಾಂಕ: 06-12-2024 ರ ಪ್ರಜಾವಾಣಿ ಕನ್ನಡ ದಿನಪತ್ರಿಕೆಯ ಮುಖ ಪುಟದಲ್ಲಿ "ದೇಗುಲಕ್ಕೆ ದಲಿತರ ಪ್ರವೇಶ: ಪೂಜೆ ಸ್ಥಗಿತ" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾದ ವರದಿಯನ್ನು ಆಯೋಗವು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ 1993 ರ ಕಲಂ 12ರ ಅಡಿಯಲ್ಲಿ ಸ್ವಯಂ ಪ್ರೇರಿತ ದೂರರ್ಜಿಯನ್ನಾಗಿ ದಾಖಲಿಸಿಕೊಂಡಿದೆ. ಮೇಲ್ಕಂಡ ವರದಿಯಲ್ಲಿ ದಲಿತ ಯುವಕರು ಚಿಕ್ಕಮಗಳೂರಿನ ನರಸೀಪುರ ಗ್ರಾಮದ ತಿರುಮಲ ದೇವಸ್ಥಾನ ಪ್ರವೇಶ ಮಾಡಿದ್ದರಿಂದ ಎರಡು ದಿನಗಳಿಂದ ಪೂಜೆ ಸ್ಥಗಿತಗೊಂಡಿದೆ. ಅಸ್ಪೃಶ್ಯತೆ ಆಚರಣೆ ಕಾನೂನುಬಾಹಿರ, ಎಲ್ಲಾ ಜಾತಿಯ ಜನರಿಗೂ ದೇಗುಲದಲ್ಲಿ ಮುಕ್ತ ಅವಕಾಶ ಇದೆ ಎಂಬ ಫಲಕವನ್ನು ಅಳವಡಿಸಲು ಅಧಿಕಾರಿಗಳು ಬಂದಿದ್ದರು. ಮಂಗಳವಾರ ಸಂಜೆ ಗ್ರಾಮಕ್ಕೆ ಬಂದ ತಹಶೀಲ್ದಾರ್ ಸುಮಂತ್ ಅವರು ಇಬ್ಬರು ದಲಿತ ಯುವಕರನ್ನು ದೇಗುಲದ ಒಳಗೆ ಕರೆದೊಯ್ದರು. ಅಂದು ದೇಗುಲದ ಕೀ ನೀಡಿದ ಗ್ರಾಮಸ್ಥರು ಅದನ್ನು ವಾಪಸ್ಸು ಪಡೆಯಲು ಗ್ರಾಮಸ್ಥರು ಹಿಂದೇಟು ಹಾಕಿದ್ದು, ಅಂದಿನಿಂದ ಪೂಜೆ ಸ್ಥಗಿತಗೊಂಡಿದೆ. ಗುರುವಾರ ಬೆಳಿಗ್ಗೆ ಗ್ರಾಮಕ್ಕೆ ಮುಜರಾಯಿ, ಸಮಾಜ ಕಲ್ಯಾಣ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಎರಡೂ ಸಮಾಜದವರ ಸಭೆ ನಡೆಸಿ ದೇಗುಲಗಳಿಗೆ ಎಲ್ಲರಿಗೂ ಮುಕ್ತ ಅವಕಾಶ ಇದೆ. ಪ್ರವೇಶ ನಿರಾಕರಿಸಿದರೆ ಅಸ್ಪೃಶ್ಯತೆ ಆಚರಣೆ ಎಂದು ತೀರ್ಮಾನಿಸಿ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದರು. ಗ್ರಾಮಸ್ಥರು, ಈವರೆಗೆ ದೇಗುಲದ ಒಳಗೆ ಬಾರದವರು ಈಗ ಬರಬೇಕು ಎಂದು ಕೇಳುತ್ತಿದ್ದಾರೆ. ಪೂಜೆ, ಜಾತ್ರೆ, ಹಬ್ಬ ಇವುಗಳ ಜವಾಬ್ದಾರಿಯನ್ನೂ ಅವರೇ ಹೊರಬೇಕು ಎಂದು ಕುರುಬ ಸಮಾಜದವರು ಪಟ್ಟುಹಿಡಿದರು. ನಾವು ಎಲ್ಲರಂತೆ ದೇಗುಲದ ಒಳಗೆ ಕೈಮುಗಿಯಲು ಅವಕಾಶ ಕೇಳುತ್ತಿದ್ದೇವೆ, ಪೂಜೆ ಮತ್ತು ಬೇರೆ ಜವಾಬ್ದಾರಿಗಳು ನಮಗೆ ಬೇಡ ಎಂದು ದಲಿತ ಯುವಕರು ಹೇಳಿದರು. ಅಧಿಕಾರಿಗಳು |

| | | | | | |
|---|---|---|---|---|---|
| | | | | | ಮನವೊಲಿಸುವ ಪ್ರಯತ್ನ ಮಾಡಿದರೂ ಸಾಧ್ಯವಾಗದಿದ್ದಾಗ ಮೇಲಾಧಿಕಾರಿಗಳಿಗೆ ವರದಿ ನೀಡುವುದಾಗಿ ತಿಳಿಸಿ ವಾಪಸ್ ಹೋದರು. ಸಂಜೆ ವೇಳೆಗೆ ಉಪ-ವಿಭಾಗಾಧಿಕಾರಿ ದಲ್ಜಿತ್ ಕುಮಾರ್, ತಹಶೀಲ್ದಾರ್ ಸುಮಂತ್, ಡಿ.ವೈ.ಎಸ್.ಪಿ. ಶೈಲೇಂದ್ರ ಸೇರಿ ಹಲವು ಅಧಿಕಾರಿಗಳು ಸ್ಥಳಕ್ಕೆ ಬಂದು. ದೇಗುಲ ಪ್ರವೇಶಕ್ಕೆ ಎಲ್ಲರಿಗೂ ಮುಕ್ತ ಅವಕಾಶ ಇದೆ. ಕಾನೂನು ಪ್ರಕಾರ ಕ್ರಮ ಕೈಗೊಂಡರೆ ಎಲ್ಲರಿಗೂ ತೊಂದರೆಯಾಗಲಿದೆ ಎಂದು ಮನವರಿಕೆ ಮಾಡಿದ ನಂತರ ಗ್ರಾಮಸ್ಥರು ಒಪ್ಪಿಗೆ ಸೂಚಿಸಿದರು ಎಂದು ವರದಿಯಾಗಿದೆ. |

16/12/24

ಕಾರ್ಯದರ್ಶಿ (ಪ್ರ)
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ
ಆಯೋಗ